# ಚಾರಣಸ್ನೇಹಿ ‘ಮುರಿಯದ ಕೋಟೆ’



ಕೋರಿಗಢ್, ಮಹಾರಾಷ್ಟ್ರದ ಪುಣೆ ಜಿಲ್ಲೆಯ ಲೋನಾವಾಲಾದಿಂದ 20 ಕಿ.ಮೀ. ದೂರದಲ್ಲಿರುವ ಆಂಬಿ ಕಣಿವೆಯ ಬಳಿಯಿರುವ ಒಂದು ಸುಂದರ ಬೆಟ್ಟದ ಕೋಟೆಯಾಗಿದೆ. ಮೂಲತಃ ಸ್ಥಳೀಯ ಕೋರಿ ಜನರ ಕೋಟೆಯಾಗಿದ್ದ ಇದನ್ನು ‘ಕೋರಿಗಢ್’ ಅಥವಾ ‘ಕೊರೈಗಢ್’ ಎಂದು ಕರೆಯಲಾಗಿದೆ. 15ನೇ ಶತಮಾನಕ್ಕಿಂತಲೂ ಹಿಂದಿನ ನಿರ್ಮಿತಿಯಾಗಿದ್ದು, ಸಮುದ್ರ ಮಟ್ಟದಿಂದ 923 ಮೀಟರ್ ಎತ್ತರದಲ್ಲಿದೆ. ಛತ್ರಪತಿ ಶಿವಾಜಿ ಮಹಾರಾಜರು 1657ರಲ್ಲಿ ಇದನ್ನು ತಮ್ಮ ಅಧಿಪತ್ಯಕ್ಕೆ ತೆಗೆದುಕೊಂಡಿದ್ದರು.

ಕೋಟೆಯೊಳಗೆ ವಿಷ್ಣು ಮತ್ತು ಶಿವನಿಗೆ ಅರ್ಪಿತವಾದ ಹಲವಾರು ಸಣ್ಣ ದೇವಾಲಯಗಳ ಜೊತೆಗೆ ಇಲ್ಲಿನ ಪ್ರಮುಖ ಪೋಷಕ ದೇವತೆ ಕೊರೈದೇವಿ ಮಂದಿರವು ಅಸ್ತಿತ್ವದಲ್ಲಿದೆ. 2 ಕಿ.ಮೀ.ಗಳಷ್ಟು ಉದ್ದದ ಅಖಂಡ ಪರಿಧಿಯುಳ್ಳ, ಕಲ್ಲು ಗಾರೆಗಳಿಂದ ನಿರ್ಮಿತವಾದ ಅಬಾಧಿತ ಗೋಡೆಯು ಕೋಟೆಯ ಆಸಕ್ತಿದಾಯಕ ಮತ್ತು ಮಹತ್ವದ ಭಾಗವಾಗಿದೆ. ಈ ಗೋಡೆಯ ಮೇಲೆ ಒಬ್ಬ ವ್ಯಕ್ತಿ ಸುಲಭವಾಗಿ ಮತ್ತು ಸುರಕ್ಷಿತವಾಗಿ ನಡೆಯಬಹುದಾದಷ್ಟು ಅಗಲವಾದ ಮೇಲ್ದಾರಿಯಿದೆ. ಆರಂಭಿಕ ಕಾಲದಲ್ಲಿ ಶತ್ರುಗಳ ವಿರುದ್ಧ ದಾಳಿಗಾಗಿ ಬಳಸುತ್ತಿದ್ದ 6 ಹಳೆಯ ಫಿರಂಗಿಗಳನ್ನಿಲ್ಲಿ ಇರಿಸಲಾಗಿದೆ. ಕೋಟೆಯ ಮೇಲೆ ಕಣ್ತಣಿಸುವ 2 ಸುಂದರ ಸರೋವರಗಳಿವೆ. ವಿಶೇಷತೆಯೆಂದರೆ, ಕೋಟೆಯ ಮೇಲಿನ ರಚನೆಗಳು ಶತಮಾನಗಳಿಂದೀಚೆಗೆ ಯಥಾಸ್ಥಿತಿಯಲ್ಲಿ ಉಳಿದಿದ್ದು ಪ್ರಸ್ತುತ ತನ್ನ ಸುಭದ್ರ ಸ್ಥಿತಿಯಿಂದಾಗಿ ‘ಮುರಿಯದ ಕೋಟೆ’ಯೆಂದು ಪ್ರಸಿದ್ಧಿ ಪಡೆದಿದೆ. ಈ ಭದ್ರಕೋಟೆಯ ಮೇಲಿಂದ ನಿಲುಕುವ ತಪ್ಪಲು ಪ್ರದೇಶದ ಹಚ್ಚ ಹಸಿರಿನ ಸುಂದರ ನೋಟ ವಿಹಂಗಮವಾಗಿದೆ. ವಿಶೇಷವಾಗಿ ಸೂರ್ಯೋದಯ ಮತ್ತು ಸೂರ್ಯಾಸ್ತದ ಸೊಬಗು ರಮಣೀಯ!

ವರ್ಷದ ಯಾವುದೇ ಸಮಯದಲ್ಲಿ ಒಂದು ದಿನದ ಚಾರಣಕ್ಕಾಗಿ ಅಥವಾ ಕ್ಯಾಂಪಿಂಗ್‌ಗಾಗಿ ಭೇಟಿ ನೀಡಬಹುದಾದ ಅನ್ವರ್ಥಕ ತಾಣವಿದು. ವಿಶೇಷವಾಗಿ ಮೊದಲ ಬಾರಿಗೆ ಚಾರಣಕ್ಕೆ ಹೋಗುವವರಿಗೆ ಇದು ಸುಲಭಸೂಕ್ತವೆನಿಸಿದ್ದು, ಸುವ್ಯವಸ್ಥಿತ ಮೆಟ್ಟಿಲುಗಳು ಹಾಗೂ ಸಹ್ಯಾದ್ರಿ ಪರ್ವತಗಳ ನಿಸರ್ಗ ಸುಂದರ ವಾತಾವರಣ ಚಾರಣಿಗರ ಉಲ್ಲಾಸವನ್ನು ಇಮ್ಮಡಿಗೊಳಿಸುತ್ತದೆ.

**–ರಮಣ್ ಶೆಟ್ಟಿ ರೆಂಜಾಳ, ಮುಂಬೈ**

# ಛಲದಂಕಮಲ್ಲ ಬಾಳೆ



ಮೊಮ್ಮಕ್ಕಳ ಸಲುವಾಗಿ ಬೆಂಗಳೂರಿನ ಮಗನ ಮನೆಯಲ್ಲಿ ಇರಬೇಕಾಗಿದೆ. ಹಾಸನದ ನಮ್ಮ ಮನೆಗೆ ಆಗಾಗ್ಗೆ ಹೋಗಿ ಕೆಲ ದಿನ ಉಳಿದುಕೊಂಡು ಬೆಂಗಳೂರಿಗೆ ಹಿಂದಿರುಗುತ್ತೇವೆ. ಮನೆಯ ಹಿಂದೆ ಖಾಲಿ ಸ್ಥಳವಿದ್ದು, ಅಲ್ಲಿ ಕೆಲ ಗಿಡಗಳನ್ನು ಹಾಕಿದ್ದೇವೆ. ಬೆಂಗಳೂರಿನಲ್ಲೇ ಹೆಚ್ಚು ಇರುವುದರಿಂದ, ಸುರಕ್ಷತೆಗಾಗಿ ಮನೆಯ ಹಿಂಭಾಗದ ಖಾಲಿ ಸ್ಥಳಕ್ಕೆ, ಮೂರೂ ದಿಕ್ಕುಗಳಲ್ಲದೆ ಮೇಲ್ಭಾಗಕ್ಕೂ, ಕಬ್ಬಿಣದ ಆವರಣದ ಭದ್ರತೆ ಒದಗಿಸಿದ್ದೇವೆ. ಮನೆಯ ಹಿಂದೆ ಬೇರೆ ಗಿಡಗಳ ಜೊತೆಗೆ ಒಂದು ಬಾಳೆಯ ಗಿಡವೂ ಇದೆ. ಕಳೆದ ಸಾರಿ ನಾವು ಬಂದಿದ್ದಾಗ ಅದು ಕಬ್ಬಿಣದ ಸರಳುಗಳಿಗೆ ತಾಗಿಕೊಂಡು ಆವರಣದ ಕೆಳಗೆ ಇತ್ತು. ಅದರ ಎಲೆಗಳು ಅತ್ತಿತ್ತ ಹರಡಿಕೊಂಡಿದ್ದವು. ಬಾಳೆಗಿಡ ಇನ್ನು ಬೆಳೆಯಲಾರದು ಅಂದುಕೊಂಡೇ ಬೆಂಗಳೂರಿಗೆ ಹೋಗಿದ್ದೆವು. ಈಚೆಗೆ ಹಾಸನಕ್ಕೆ ಬಂದು ನೋಡಿದಾಗ, ಆ ಗಿಡ ಕಬ್ಬಿಣದ ಸರಳುಗಳ ನಡುವೆ ಇದ್ದ ಆರು ಇಂಚಿನ ಚೌಕದ ನಡುವೆಯೇ ತೂರಿಕೊಂಡು ಮೇಲೆ ಹೋಗಿದೆ. ಅಲ್ಲೇ ಎಲೆಗಳನ್ನು ಚಾಚಿಕೊಂಡು, ಒಂದು ಗೊನೆಯನ್ನೂ ಬಿಟ್ಟಿದೆ! ಮನೆಗೆ ಬಂದವರಿಗೆಲ್ಲಾ ಈ ಕೌತುಕ ಅಚ್ಚರಿ ಮೂಡಿಸುತ್ತಿದೆ. ಇದೀಗ ನಮ್ಮ ಕಾಲೊನಿಯ ನಿವಾಸಿಗಳಿಗೆ ಆಕರ್ಷಣೆಯ ಕೇಂದ್ರವಾಗಿದೆ.



**–ಡಿ. ಅನಂತ್, ಹಾಸನ**

# ರೋಗ ನಿವಾರಕ ಮುದಿ ಹನುಮಪ್ಪ

ಊರುಕೇರಿ ಎಂದ ಮೇಲೆ ಒಂದಲ್ಲಾ ಒಂದು ವಿಶೇಷ ಶಕ್ತಿ ಹೊಂದಿರುವ ಹನುಮಂತನ ದೇವಾಲಯ ಇದ್ದೇ ಇರುತ್ತದೆ. ಅಂಥ ವಿಶೇಷ ಹನುಮಂತನ ದೇಗುಲ ಹಳೆ ಹುಬ್ಬಳ್ಳಿಯಲ್ಲಿದೆ.  ಕೆಲಸದ ನಿಮಿತ್ತ ಧಾರವಾಡಕ್ಕೆ ಹೋಗುವುದಕ್ಕೂ ಮೊದಲು ಕಸಬಾಪೇಟೆ, ಹಳೆ ಹುಬ್ಬಳ್ಳಿ ‘ಮುದಿ ಹನುಮಪ್ಪನ ದೇವಾಲಯ’ ನೋಡಲು ಮನಸ್ಸಾಯಿತು.



ಶ್ರೀ ಮುದಿ ಹನುಮಂತ ದೇವಾಲಯವು ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ (10 ರಿಂದ 12ನೇ ಶತಮಾನಕ್ಕೆ) ಹಿಂದಿನದು. ಜಕಣಾಚಾರ್ಯರು ಕೆತ್ತಿದ್ದಾರೆ ಎನ್ನಲಾದ ಸೂರ್ಯನಾರಾಯಣ, ಈಶ್ವರನ ಮೂರ್ತಿ ಹಾಗೂ ವಿಶೇಷ ಶಕ್ತಿ ಹೊಂದಿರುವ ಮುದಿ ಹನುಮಪ್ಪನ ವಿಗ್ರಹವಿದೆ. ಅದರ ಮುಂಭಾಗದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ, ಐದು ಹೆಡೆಯ ನಾಗರಕಲ್ಲು (ಹಳ್ಳದಂತೆ, ಮನುಷ್ಯನ ದೇಹ ಹೊಕ್ಕುವ ಹಾಗೆ ಇರುವ ಬಂಡೆಕಲ್ಲು) ಇದೆ. ಈ ನಾಗರ ಕಲ್ಲಿನ ಬಂಡೆಯಲ್ಲಿ ಪವಾಡ ಶಕ್ತಿ ಇದೆ ಎಂಬುದು ಭಕ್ತಾದಿಗಳ ನಂಬಿಕೆ. ಇದಕ್ಕೆ ತಮ್ಮ ಬೆನ್ನು, ಮೈ–ಕೈ, ಕಾಲುಗಳನ್ನು ಉಜ್ಜುವುದರಿಂದ ಕ್ರಮೇಣ ನೋವು ಹೋಗುತ್ತದೆ ಎಂಬ ನಂಬಿಕೆಯೂ ಇದೆ.

ಈ ದೇಗುಲದಲ್ಲಿ ಎರಡು ದಿನಗಳ ಕಾಲ ಶಿವಾಜಿ ಮಹಾರಾಜ್ ತಂಗಿದ್ದು, ಪೂಜೆ ಮಾಡಿ ನಂತರ ಶಿರಹಟ್ಟಿಯ ಮೇಲೆ ದಂಡೆತ್ತಿ ಹೋದರು ಎಂಬ ಐತಿಹ್ಯವಿದೆ. ಮುಖ್ಯ ರಸ್ತೆಯಲ್ಲಿರುವ ಈ ದೇವಾಲಯ ಒಳಗಡೆ ವಾಡೆಯ ಮನೆಯಂತಿದ್ದು, ಚೌಕಾಕಾರದ ರೀತಿಯ ತೊಟ್ಟಿ ಮನೆಯ ಹಾಗೆ ಕಾಣುತ್ತದೆ. ಹುಬ್ಬಳ್ಳಿ ರೈಲ್ವೆ ಸ್ಟೇಷನ್ ಅಥವಾ ಹಳೆಯ ಬಸ್ ನಿಲ್ದಾಣದಿಂದ ಆಟೊ ಮೂಲಕ ಈ ರೋಗ ನಿವಾರಕ ಮುದಿ ಹನುಮಪ್ಪನ ದೇಗುಲಕ್ಕೆ ಹೋಗಿ ಬರಬಹುದು.

**–ಅನುರಾಧ ಟಿ., ದಾವಣಗೆರೆ**